## ಕವಿತೆ




## ಶೋಭಾ ನಾಯಕ

ಕಲೆ: ರೂಪಶ್ರೀ ಕಲ್ಲಿಗನೂರು




# ತಪಾಸಣೆ

ಪ್ರೇಮಿಗಳ ದಿನದಂದೇ
ಹೃದಯ ತಪಾಸಣೆಗೆ ಬಂದಿರುವೆ
ಏನಾಗುವುದೋ ಫಲಿತಾಂಶ!

ವಾರ್ಡಿನ ಹೊರಗೆ
ಎಷ್ಟೊಂದು ಜನ ನಿಂತಿದ್ದಾರೆ!
ಅವರಲ್ಲಿ ಹಲವರು
ನನ್ನನು ಈ ಮೊದಲು ಕಂಡವರಲ್ಲ
ಇ.ಸಿ.ಜಿ. ಕೋಣೆಯಿಂದ
ಡಾಕ್ಟರ್ ಹೇಳಿದ
ನಿಮ್ಮ ಹೃದಯ ಬಡಿತದ ತರಂಗಾಂತರ
ಕುಸಿದಿದೆ ಎಂದು

ಆದರೆ
ದೂರದಿಂದ ನನ್ನನು ನೋಡಲೆಂದೇ ಬಂದು
ವಾರ್ಡಿನ ಗಾಜಿನ ಬಾಗಿಲಾಚೆ ನಿಂತ
ಅವರಿಗೆಲ್ಲಾ ತಲುಪುವಷ್ಟು ವ್ಯಾಪ್ತವಾಗಿದ್ದು
ನಿಜವಿರಬಹುದೇ?
ಅಥವಾ
ಡಾಕ್ಟರ್ ಹೇಳಿದ್ದು?



ನಿಯಮಿತವಾಗಿ 72 ಸಲ ಬಡಿದುಕೊಳ್ಳುತ್ತಿದ್ದ
ಈ ಹೃದಯ
ಈಗ 71 ಸಲ ಮಾತ್ರ ಬಡಿದುಕೊಳ್ಳುತ್ತಿದೆಯಂತೆ

ಹಾಗಾದರೆ
ಕಡಿಮೆಯಾದ ಆ ಒಂದು ಮಿಡಿತವನು
ಕದ್ದವರು ಯಾರು?
ಅಥವಾ
ಯಾರಿಗಾಗಿ
ಹೃದಯ ಒಂದು ಕ್ಷಣ ಮೌನವಾಗುತಿರಬಹುದು?